೨ ಗದ್ಯ

# ಬೀರಬಲ್ಲನ ಜಾಣ್ಮೆ



ಅಕ್ಬರನ ಆಸ್ಥಾನದಲ್ಲಿ ಬೀರಬಲ್ಲನೆಂಬ ಮಂತ್ರಿ ಇದ್ದನು. ಅವನ ಬಳಿ ಜನರು ಸಮಸ್ಯೆಗಳಿಗೆ ಪರಿಹಾರ ಕೇಳಲು ಬರುತ್ತಿದ್ದರು.

ಒಂದು ಸಾರಿ ವ್ಯಾಪಾರಿಯೊಬ್ಬ ಬೀರಬಲ್ಲನ ಬಳಿಗೆ ಬಂದು "ಸ್ವಾಮಿ ನಾನೊಂದು ಸಮಸ್ಯೆಯಲ್ಲಿದ್ದೇನೆ. ದಯಮಾಡಿ ತಾವು ಸಹಾಯ ಮಾಡಬೇಕು" ಎಂದು ಪ್ರಾರ್ಥಿಸಿದನು.

"ನಿಮ್ಮ ಸಮಸ್ಯೆ ಏನು?" ಎಂದು ಬೀರಬಲ್ಲನು ಕೇಳಿದನು.

"ನನ್ನ ಹತ್ತಿರ ಎಂಟು ಚೀಲಗಳಿದ್ದವು. ಒಂದೊಂದರಲ್ಲೂ ಸಾವಿರ ಚಿನ್ನದ ನಾಣ್ಯಗಳಿದ್ದವು. ಆ ಚೀಲಗಳಲ್ಲಿ ಒಂದು ಚೀಲ ಕಳುವಾಗಿದೆ" ಎಂದನು ವ್ಯಾಪಾರಿ.



Scanned with CamScanner



"ನಿಮಗೆ ಯಾರ ಮೇಲಾದರೂ ಅನುಮಾನವಿದೆಯೇ?" ಎಂದು ಬೀರಬಲ್ಲನು ವ್ಯಾಪಾರಿಯನ್ನು ಕೇಳಿದನು.

"ನನ್ನ ಬಳಿ ಕೆಲಸ ಮಾಡುವ ನಾಲ್ಕು ಮಂದಿ ಸೇವಕರಿದ್ದಾರೆ. ಅವರು ಚೀಲಗಳನ್ನು ಎತ್ತಿರಿಸಿದ್ದರು. ಅವರಲ್ಲಿ ಯಾರಾದರೊಬ್ಬ ಒಂದು ಚೀಲ ಕದ್ದಿರಬೇಕು. ಆದರೆ ಯಾರು ಎಂಬುದು ನನಗೆ ತಿಳಿಯುತ್ತಿಲ್ಲ" ಎಂದನು ವ್ಯಾಪಾರಿ.

"ಹಾಗಾದರೆ ನಿನ್ನ ಸೇವಕರನ್ನು ಇಲ್ಲಿಗೆ ಕರೆಸು" ಎಂದು ಬೀರಬಲ್ಲನು ಹೇಳಿದನು.

ಆ ಸೇವಕರು ಬಂದ ಮೇಲೆ ಒಬ್ಬೊಬ್ಬರಿಗೂ ಒಂದೇ ಸಮನಾದ ಕಡ್ಡಿಗಳನ್ನು ಕೊಟ್ಟನು. "ಈ ಕಡ್ಡಿಗಳನ್ನು ನಾಳೆ ನೀವು ನನಗೆ ಹಿಂದಿರುಗಿಸಬೇಕು. ಇವು ಮಾಂತ್ರಿಕ ಕಡ್ಡಿಗಳು. ನಿಮ್ಮ ಯಜಮಾನನ ಮನೆಯಿಂದ ಚಿನ್ನದ ಚೀಲ ಕಾಣೆಯಾಗಿರುವುದು ನಿಮಗೆಲ್ಲಾ ಗೊತ್ತು. ಯಾರು ಕಳ್ಳನೋ ಅವನ ಕಡ್ಡಿ ರಾತ್ರಿ ಎರಡು ಅಂಗುಲ ಉದ್ದ ಬೆಳೆಯುತ್ತದೆ!" ಎಂದು ಹೇಳಿ ಕಳುಹಿಸಿದನು.

ಸೇವಕರು ತಮ್ಮ ಮನೆಗಳಿಗೆ ಹೋದರು. ಕಳ್ಳತನ ಮಾಡಿದವನು ಮಧ್ಯರಾತ್ರಿ ಎದ್ದು ತನ್ನ ಕಡ್ಡಿಯನ್ನು ಎರಡು ಅಂಗುಲ ಚಿಕ್ಕದಾಗಿ ಕತ್ತರಿಸಿದನು. 'ಇನ್ನು ನಾನು ಕಳ್ಳನೆಂದು ಯಾರಿಗೂ ಗೊತ್ತಾಗುವುದಿಲ್ಲ,' ಎಂದುಕೊಂಡು ನಿದ್ರಿಸಿದನು.

ಮರು ದಿನ ನಾಲ್ಕು ಮಂದಿ ಸೇವಕರು ಬೀರಬಲ್ಲನ ಬಳಿ ಬಂದು ತಮ್ಮ ಕಡ್ಡಿಗಳನ್ನು ವಾಪಸ್ಸು ಮಾಡಿದರು. ಆಗ ಬೀರಬಲ್ಲನು ಎರಡು ಅಂಗುಲ ಚಿಕ್ಕದಾಗಿದ್ದ ಕಡ್ಡಿಯ ಸೇವಕನನ್ನುಳಿದು ಬೇರೆಯವರು ಹೋಗಬಹುದು ಎಂದು ಹೇಳಿದನು.

"ಹೇ ಕಳ್ಳ, ಚೀಲವನ್ನು ಎಲ್ಲಿಟ್ಟಿದ್ದೀಯಾ? ತಕ್ಷಣವೇ ತಂದುಕೊಡು. ನಮ್ಮ ಸೈನಿಕರು ನಿನ್ನೊಂದಿಗೆ ಬರುತ್ತಾರೆ" ಎಂದು ಬೀರಬಲ್ಲನು ಗದರಿದನು.

ಸೇವಕನು ತಾನು ಕಳುವು ಮಾಡಿದ ಚೀಲವನ್ನು ಬೀರಬಲ್ಲನಿಗೆ ಒಪ್ಪಿಸಿದನು. ಆ ಚೀಲವನ್ನು ಬೀರಬಲ್ಲನು ವ್ಯಾಪಾರಿಗೆ ಕೊಟ್ಟನು. ವ್ಯಾಪಾರಿಯು ಬೀರಬಲ್ಲನ ಜಾಣ್ಮೆಯನ್ನು ಕೊಂಡಾಡಿದನು.



Scanned with CamScanner



# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ.

1. ಮಂತ್ರಿ = ಸಚಿವ (Minister )
2. ಬಳಿ = ಹತ್ತಿರ (Near)
3. ಪ್ರಾರ್ಥಿಸು = ಬೇಡು (Pray)
4. ಸಮಸ್ಯೆ = ತೊಂದರೆ (Problem)
5. ಪರಿಹಾರ = ನಿವಾರಣೆ (Solution)
6. ಚಿನ್ನ = ಬಂಗಾರ (Gold)
7. ವ್ಯಾಪಾರಿ = ವ್ಯಾಪಾರ ಮಾಡುವವನು (Merchant)
8. ಕಡ್ಡಿ = ಸಣ್ಣ ಕೋಲು (Stick)
9. ಕತ್ತರಿಸು = ಕಡಿ (Cut)
10. ಮಂದಿ = ಜನ (People)

## II. ವಿರುದ್ಧ ಪದಗಳನ್ನು ಬರೆಯಿರಿ.

1. ಉದ್ದ × ಅಗಲ  2. ಚಿಕ್ಕದು × ದೊಡ್ಡದು

## III. ಯಾರು ಯಾರಿಗೆ ಹೇಳಿದರು?

1. "ನಿಮ್ಮ ಸಮಸ್ಯೆ ಏನು?"

______________________________

______________________________

2. "ಆ ಚೀಲಗಳಲ್ಲಿ ಒಂದು ಚೀಲ ಕಳುವಾಗಿದೆ."

______________________________

______________________________



Scanned with CamScanner

3. "ಇನ್ನು ನಾನು ಕಳ್ಳನೆಂದು ಯಾರಿಗೂ ಗೊತ್ತಾಗುವುದಿಲ್ಲ."

4. "ಹೇ ಕಳ್ಳ, ಚೀಲವನ್ನು ಎಲ್ಲಿಟ್ಟಿದ್ದೀಯಾ?"

## IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಬೀರಬಲ್ಲನು ಯಾರ ಆಸ್ಥಾನದಲ್ಲಿದ್ದನು?
   ಅಕ್ಬರನ
2. ವ್ಯಾಪಾರಿಯು ಯಾರ ಬಳಿ ಹೋದನು?
   ಬೀರಬಲ್ಲ
3. ವ್ಯಾಪಾರಿಯ ಬಳಿಯಿದ್ದ ಚೀಲಗಳೆಷ್ಟು?
   8 (ಎಂಟು)
4. ಒಂದೊಂದು ಚೀಲದಲ್ಲೂ ಎಷ್ಟು ನಾಣ್ಯಗಳಿದ್ದವು?
   ಒಂದು ಸಾವಿರ (1000)
5. ವ್ಯಾಪಾರಿಯ ಬಳಿ ಎಷ್ಟು ಮಂದಿ ಸೇವಕರಿದ್ದರು?
   4 (ನಾಲ್ಕು)
6. ಬೀರಬಲ್ಲನು ಸೇವಕರಿಗೆ ಏನನ್ನು ಕೊಟ್ಟನು?
   ಕಡ್ಡಿ
7. ಕಳ್ಳನ ಕಡ್ಡಿಯು ಎಷ್ಟು ಅಂಗುಲ ಉದ್ದ ಬೆಳೆಯುತ್ತದೆ?
   2 (ಎರಡು)
8. ಕಳ್ಳತನ ಮಾಡಿದವನು ಮಧ್ಯರಾತ್ರಿ ಏನು ಮಾಡಿದನು?
   2 ಅಂಗುಲ ಕಡ್ಡಿಯನ್ನು ಕತ್ತರಿಸಿದನು.
9. ಬೀರಬಲ್ಲನ ಜಾಣ್ಮೆಯನ್ನು ಯಾರು ಕೊಂಡಾಡಿದರು?
   ವ್ಯಾಪಾರಿಯು

V. ಮಾದರಿಯಂತೆ ಬರೆಯಿರಿ.

ಉದಾ : ಜಾಣ್ಮೆಯನ್ನು = ಜಾಣ್ಮೆ + ಅನ್ನು

ಚೀಲವನ್ನು = .................. + ..................

ವ್ಯಾಪಾರಿಯನ್ನು = .................. + ..................

ಸಹಾಯವನ್ನು = .................. + ..................



## ಚಟುವಟಿಕೆ

1. ಶಿಕ್ಷಕರೇ ಈ ಕತೆಯನ್ನು ಮಕ್ಕಳಿಂದ ಹೇಳಿಸಿ.
2. ಬೀರಬಲ್ಲನ ಚತುರತೆಯ ಇತರ ಕಥೆಗಳನ್ನು ಗುರುಗಳಿಂದ ಕೇಳಿ ತಿಳಿಯಿರಿ. ತಿಳಿದ ಕಥೆಯೊಂದನ್ನು ಬರೆಯಿರಿ.

### ನಾನು ಯಾರು?

1. ಕೈಯಲ್ಲಿ ಲಾಠಿ, ಬಾಯಲ್ಲಿ ಸೀಟಿ.
   ರಾತ್ರಿ ನಿಮ್ಮ ರಸ್ತೆಯನ್ನು ಕಾಯುತ್ತೇನೆ.
2. ಗಿಡ ಬೆಳೆಸುತ್ತೇನೆ, ನೋಡಿಕೊಳ್ಳುತ್ತೇನೆ.



**ವಿದ್ಯೆಯನ್ನು ಯಾರೂ ಕದಿಯಲಾರರು**



Scanned with CamScanner